# ನಗರಸಭಾ ಕಾರ್ಯಾಲಯ, ಶಿರಸಿ (ಉ.ಕ.)

ಸಂ. ನಸಶಿ/ಕಾ.ವಿ./ವಿವ–37/2009–10 ದಿನಾಂಕ:– 02.11.2009.

## ದರವಾರು ಪ್ರಕಟಣೆ

ನಗರಸಭೆಯ ವಿವಿಧ ವಾರ್ಡುಗಳಲ್ಲಿ ನಡೆಯುತ್ತಿರುವ ಕಾಮಗಾರಿಗಳ ಸುಪರವಿಜನ್ ಮಾಡಲು ಕಾಮಗಾರಿ ನಿರೀಕ್ಷಕರ ಸೇವೆಯ ಅವಶ್ಯಕತೆ ಇರುತ್ತದೆ. ಮೇಲ್ಕಂಡ ಕೆಲಸ ನಿರ್ವಹಿಸಲು ಮಾನವ ಶಕ್ತಿಯ ಅವಶ್ಯಕತೆಯಿದ್ದು ಸದರಿ ಸೇವೆ ಒದಗಿಸಲು ಕನಸಲ್ಟೆನ್ಸಿ ಸಂಸ್ಥೆಯವರಿಂದ ಮಾನವ ಶಕ್ತಿ ಪೂರೈಸಲು ದರವಾರನ್ನು ಆಹ್ವಾನಿಸಲಾಗಿದೆ. ಸದರಿ ಮಾನವ ಶಕ್ತಿಯನ್ನು ಪೂರೈಸುವ ಸಂಸ್ಥೆ ತಮ್ಮ ದರವಾರನ್ನು ದಿನಾಂಕ: 12.11.2009ರ ಸಂಜೆ: 4:30 ಗಂಟೆಯವರೆಗೆ ಸಲ್ಲಿಸುವುದು. ಸ್ವೀಕೃತ ಟೆಂಡರುಗಳನ್ನು ದಿನಾಂಕ: 12.11.2009 ರಂದು ಸಂಜೆ: 5:00 ಗಂಟೆಗೆ ಹಾಜರಿರುವ ಕನ್ಸಲ್ಟೆನ್ಸಿ ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು. ರಜೆ ಇದ್ದಲ್ಲಿ ಮುಂದಿನ ಕಚೇರಿ ವೇಳೆಯಲ್ಲಿ ತೆರೆಯಲಾಗುವುದು. ಇಲ್ಲವಾದಲ್ಲಿ ಮುಂದಿನ ದಿನಾಂಕಗಳನ್ನು ತಿಳಿಸಲಾಗುವುದು. ಹೆಚ್ಚಿನ ಮಹಿತಿಗಾಗಿ, ಷರತ್ತುಗಳಿಗಾಗಿ ಕಚೇರಿಯ ಕೆಲಸದ ವೇಳೆಯಲ್ಲಿ ಖುದ್ದಾಗಿ ಬಂದು ಕೇಳಿ ತಿಳಿದುಕೊಳ್ಳತಕ್ಕದ್ದು.

1. ಖಾಲಿ ಮಾದರಿ ಟೆಂಡರು ಫಾರ್ಮಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ : 11.11.2009 (4:00 ಗಂಟೆಯವರೆಗೆ)
2. ಭರ್ತಿ ಮಾಡಲ್ಪಟ್ಟ ಮೊಹರಾದ ಟೆಂಡರು ನಮೂನೆಗಳನ್ನು ಸ್ವೀಕರಿಸುವ ದಿನಾಂಕ : 12.11.2009 (ಸಂಜೆ 4:30 ಗಂಟೆಯವರೆಗೆ)
3. ಸ್ವೀಕೃತ ಟೆಂಡರುಗಳನ್ನು ತೆರೆಯುವ ದಿನಾಂಕ : 12.11.2009 (ಸಂಜೆ 5:00 ಗಂಟೆಗೆ)

| ಕ್ರ.ಸಂ. | ವಿವರ | ಕಾಮಗಾರಿ ನಿರೀಕ್ಷಕರು |
|---|---|---|
| 1 | ನಗರಸಭೆಯ ವಿವಿಧ ವಾರ್ಡುಗಳಲ್ಲಿಯ ಕಾಮಗಾರಿಗಳ ಸುಪರವಿಜನ್ ಮಾಡುವುದು. | 2 ಮಾನವ ಶಕ್ತಿ |

ವಿಧಿಸಲಾಗಿರುವ ಪೂರ್ವ ಶರತ್ತುಗಳು:–

1. ಕನ್ಸಲ್ಟೆನ್ಸಿ ಸಂಸ್ಥೆಯವರು ನೋಂದಾಯಿತ ಇದ್ದಲ್ಲಿ ಪ್ರಾಧಾನ್ಯತೆ ನೀಡಲಾಗುವುದು.
2. ಯಶಸ್ವಿ ಕನ್ಸಲ್ಟೆನ್ಸಿ ಸಂಸ್ಥೆಯವರು ರು. 5,000/– ಭದ್ರತಾ ಠೇವಣಿಯನ್ನು ಪೌರಾಯುಕ್ತರ ಹೆಸರಿಗೆ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಡಿ.ಡಿ. ಮುಖಾಂತರ ಸಲ್ಲಿಸತಕ್ಕದ್ದು.
3. ಟೆಂಡರು ದರ ಸ್ವೀಕರಿಸುವ ಯಾ ತಿರಸ್ಕರಿಸುವ ಅಧಿಕಾರ ನಗರಸಭೆ ಕಾಯ್ದಿರಿಸಿಕೊಂಡಿದೆ.
4. ಮಾನವ ಶಕ್ತಿ ಸೇವೆ ನೀಡುವ ಅಭ್ಯರ್ಥಿಗಳು ಡಿಪ್ಲೋಮಾ (ಸಿವಿಲ್) ಹೊಂದಿದ್ದಲ್ಲಿ ಮೊದಲನೇ ಆದ್ಯತೆ ನೀಡಲಾಗುವುದು. ಈ ಕುರಿತು ದಾಖಲೆಗಳನ್ನು ದರವಾರಿನ ಜೊತೆಗೆ ಸಲ್ಲಿಸುವುದು.
5. ಮಾನವ ಶಕ್ತಿ ಕೆಲಸದ ಸಮಯವನ್ನು ನಗರಸಭೆ ಅಧಿಕಾರಿಯ ನಿರ್ಧಾರಕ್ಕೊಳಪಡುತ್ತದೆ.
6. ಅಭ್ಯರ್ಥಿಯು ಸಾರ್ವಜನಿಕ ಸಂಸ್ಥೆಯಲ್ಲಿ ಹೊರಗುತ್ತಿಗೆ ನಾತೆಯಿಂದ ಕನಿಷ್ಟ 1 ವರ್ಷದ ಅನುಭವ ಹಾಗೂ ಕ್ಷೇತ್ರ ಅನುಭವ ಹೊಂದಿರತಕ್ಕದ್ದು.

ಅಧ್ಯಕ್ಷರು,
ನಗರಸಭೆ, ಶಿರಸಿ.

ಪೌರಾಯುಕ್ತರು,
ನಗರಸಭೆ, ಶಿರಸಿ.